ದಿಃ 27-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಪಾಟೀ ಸವಾಲು ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಂ.ಎಂ.ಕೆ. ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಬಿ.ಎಲ್.ಟಿ. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು , ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.100/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

ನಾನು ಶಾಲೆಯನ್ನು ಕಲಿತಿರುವುದಿಲ್ಲ. ನಾನು ನ್ಯಾಯಾಲಯದಿಂದ ನೋಟಿಸನ್ನು ಸಾಕ್ಷಿ ನುಡಿಯಲು ಪಡೆದಿರುವುದಿಲ್ಲ. 1 ನೇ ವಾದಿಯು ನನಗೆ ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾರೆ. ವಾದಿ ಪರ ವಕೀಲರು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರಿಸಿರುತ್ತಾರೆ . ತಯಾರಿಸಿದ ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇಂಗ್ಲೀಷ್ ನಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ ಎಂದರೆ ಸರಿ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಬರೆಯಲು ನಾನು ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವ ಮಾಹಿತಿಯನ್ನು ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

**2.** 1 ರಿಂದ 4 ನೇ ಪ್ರತಿವಾದಿಯರು ನನಗೆ ಗೊತ್ತಿಲ್ಲ. ಈ ಕೇಸನ್ನು ಯಾರು ಯಾರ ಮೇಲೆ, ಯಾವ ವಿಚಾರಕ್ಕಾಗಿ ಹಾಕಿರುತ್ತಾರೆ ಮತ್ತು ಈ ದಾವೆಯ ದಾಖಲೆಗಳನ್ನು ನಾನು ಪರಿಶೀಲಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಹಾಜರುಪಡಿಸಿದ ವಾದಿ ಪರ ವಕೀಲರ ಹತ್ತಿರ ಇರುವ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನಾನು ಸಾಕ್ಷಿಯನ್ನು ಹೇಳಬಲ್ಲೆ ಎಂದು ನುಡಿಯುತ್ತಾರೆ. ನಮ್ಮ ಜಮೀನು

ದಾವಾ ಆಸ್ತಿಗಿಂತ ಎಷ್ಟು ದೂರದಲ್ಲಿರುತ್ತದೆ ಎಂದರೆ ಸಾಕ್ಷಿಯು 100 ಅಡಿಗಳ ಅಂತರದಲ್ಲಿರುತ್ತದೆ ಎಂದು ನುಡಿಯುತ್ತಾರೆ. 100 ಅಡಿಗಳ ಅಂತರದಲ್ಲಿ ನನ್ನ ಆಸ್ತಿ ಇರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಪಿಟಿ ಶೀಟ್ ದಾಖಲೆಯನ್ನು ಹಾಜರುಪಡಿಸಲು ಏನಾದರೂ ಅಡಚಣೆ ಇದೆಯೇ ಎಂದರೆ ಸಾಕ್ಷಿಯು ಯಾವುದೇ ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯನ್ನು ವೈಯಕ್ತಿಕವಾಗಿ ನೋಡಿರುತ್ತೇನೆ.

**3.** ನಾನು ಈಗ ನೋಡುತ್ತಿರುವ 7 ಪೋಟೋಗಳು ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟ ಪೋಟೋಗಳಾಗಿರುತ್ತವೆ . ಸಾಕ್ಷಿಯು ಸದರಿ ಪೋಟೋಗಳನ್ನು ಗುರುತಿಸಿರುವುದರಿಂದ ಸದರಿ ಪೋಟೋಗಳನ್ನು ನಿಡಿ -1 ರಿಂದ 7 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸದರಿ ನಿಡಿ -1 ರಿಂದ 7 ರಲ್ಲಿರುವ ವ್ಯಕ್ತಿಯನ್ನು ಗುರುತಿಸಬಹುದಾ ಎಂದರೆ ಸಾಕ್ಷಿಯು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಯರು ಸಹೋದರರು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನಗೆ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ವಾಟ್ನಿ ಆದ ಕುರಿತು ಗೊತ್ತಿರುವುದಿಲ್ಲ. ದಿನಾಂಕ 12.07.1982 ರಂದು ವಾದಿಯರು ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಯರಿಗೆ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರದ ಆಧಾರದ ಮೇಲಿಂದ ದಿನಾಂಕ 1982 ರಿಂದ ಈವರೆಗೂ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ. 1 ನೇ ವಾದಿಯು ಬೆಳಗಾವಿಯಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಬಂದು ಹೋಗುವುದು ಮಾಡುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಈವರೆಗೂ ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಕಬ್ಜೆಯಲ್ಲಿರುವ ಬಗ್ಗೆ ನನಗೆ ಗೊತ್ತಿದ್ದರೂ ನಾನು ಉದ್ದೇಶಪೂರ್ವಕವಾಗಿ ವಾದಿಯರಿಗೆ

ಸಹಾಯ ಮಾಡಲು ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**